
ಅಗಸ್ಟ್ ೨೦೧೮

# ಕಾನನ

ನಿಸರ್ಗದೆಡೆಗೆ ಪಯಣ



BANNERUGHATTA

WILDLIFE
CONSERVATION
GROUP

# ಕಾನನ

ನಿಸರ್ಗದೆಡೆಗೆ ಪಯಣ


**ಸಂಪಾದಕೀಯ**

ಅಶ್ವಥ ಕೆ.ಎನ್

**ಲೇಖನ ವೃಂದ**

ಮಹದೇವ ಕೆ.ಸಿ

ಅಶ್ವಥ ಕೆ.ಎನ್

ಶಂಕರಪ್ಪ ಕೆ.ಪಿ

ಸುಬ್ಬು ಬಾದಲ್

ಶ್ರೀಕಾಂತ್ ಬಿ. ಭಟ್

**ಕರಡು ತಿದ್ದುಪಡಿ**

ಮುರಳಿ ಎಸ್

**ವಿನ್ಯಾಸ**

ಮಹದೇವ ಕೆ.ಸಿ

**ಛಾಯಾಚಿತ್ರ**

ಕಾರ್ತಿಕ್ ಎ.ಕೆ

**ಇ–ವಿಳಾಸ**

kaanana.mag@gmail.com

www.issuu.com/kaanana


**ಮುಖಪುಟ**

ಆನೆ


WILDLIFE CONSERVATION GROUP





ಸಂಪಾದಕೀಯ





ಚಿಟ್ಟೆ ಗುರುತು





ಕಡಲಕ್ಕಿಗಳು





ಕಾಲೇ ಕಿವಿ-ತಲೆಯೇ ಕಹಳೆ !





ಕಾನನ ಬಂಧ





ಇರುಳು-ಉರುಳು (ಕವನ)





ಪ್ರಕೃತಿ ಬಿಂಬ

# ಸಂಪಾದಕೀಯ

"ಆನೆ ಇದ್ದರೂ ಲಕ್ಷ, ಸತ್ತರೂ ಲಕ್ಷ" ಎಂದು ಹಳ್ಳಿಗರು ಆಡುವ ಮಾತಿದೆ. ಹೀಗೆ ಕರೆಯಲು ಕಾರಣವೂ ಇದೆ. ದೈತ್ಯಾಕಾರದ ತೂಕದ ಸಸ್ಯಾಹಾರಿ ಪ್ರಾಣಿ ಆನೆ, ಕರ್ನಾಟಕದಲ್ಲಿ ಹೇರಳವಾದ ಸಾಂದ್ರತೆಯನ್ನು ಹೊಂದಿದೆ. ಆನೆಗಳು ತಮ್ಮ ಪೂರ್ವಜರು ನಡೆದಾಡುವ ದಾರಿಗಳನ್ನು ಸಹ ತಿಳಿಯಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಬಂಡೀಪುರ, ನಾಗರಹೊಳೆ, ಮಧುಮಲೆ, ಬಿಳಿಗಿರಿರಂಗನ ಬೆಟ್ಟ, ಅಣಶಿ-ದಾಂಡೇಲಿ, ಭದ್ರಾ, ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಗಳಲ್ಲಿ ಹೆಚ್ಚಾಗಿ ಕಾಣಸಿಗುವ ಆನೆಗಳು, ಕಬಿನಿಯ ಹಿನ್ನೀರಿನಲ್ಲಿ ಈ ಆನೆಗಳ ಹಿಂಡನ್ನು ನೋಡುವುದೇ ಸೊಬಗು.

ಆದರೆ ಈ ವನ್ಯ ಆನೆಗಳು ಮನುಷ್ಯನ ಆಸೆ ದುರಾಸೆಗೆ ತಮ್ಮನ್ನ ತಾವೇ ಕಾಪಾಡಿಕೊಳ್ಳಲಾಗದೆ ಪರದಾಡಬೇಕಿದೆ. ಆನೆ ಕಾರಿಡಾರುಗಳೆಲ್ಲ ಹೆದ್ದಾರಿ ರಸ್ತೆಗಳು, ಬಡಾವಣೆಗಳಾಗಿವೆ, ಕಾಡಿನ ರಾಜನಾಗಿ ಮೆರೆಯುತ್ತಿದ್ದ ಆನೆ, ದಂತಚೋರರ ಬಂದೂಕುಗಳಿಗೆ ಬಲಿಯಾಗುತ್ತಿವೆ. ಜನಸಂಖ್ಯಾ ಸ್ಫೋಟದಿಂದ ಜನರ ವಸತಿಗಾಗಿ ಕೈಗಾರಿಕಾ ಪ್ರದೇಶಗಳಿಗಾಗಿ ಕಾಡುಗಳು ಬರಡಾಗುತ್ತಿವೆ, ಕಾಡಿನಲ್ಲಿರುವ ಮರಮುಟ್ಟುಗಳು ನಗರದಲ್ಲಿರುವ ಮನೆಗಳ ವೈಭವವನ್ನು ಹೆಚ್ಚಿಸುವ ಸೋಫಾಗಳಾಗಿವೆ. ಆದರೆ ಕಾಡಿನಲ್ಲಿ ತಮ್ಮ ಪಾಡಿಗೆ ತಾವಿದ್ದ ವನ್ಯ ಮಿಕಗಳಿಗೆ ಕಾಡು ಸೂರಿಲ್ಲದ ಸೂತಕದ ಮನೆಯಾಗಿವೆ. ಆನೆ ದೈತ್ಯ ಪ್ರಾಣಿಯಾದ್ದರಿಂದ ದಿನಕ್ಕೆ ಬೇಕಾಗುವಂತಹ ಆಹಾರ ಕಾಡಿನಲ್ಲೇ ಸಿಗದೆ, ಆನೆಗಳು ತಮ್ಮ ಪ್ರಯಾಣವನ್ನು ನಾಡಿನತ್ತ ಬೆಳೆಸುತ್ತಿವೆ. ಹೀಗೆ ನಾಡಿಗೆ ಬಂದ ಆನೆಗೆ ಹಿಂಸಿಸಿ ಅವುಗಳಿಗೆ ಪುಂಡಾನೆಯ ಪಟ್ಟಕಟ್ಟಿ ಆನೆಗಳನ್ನು ಖೆಡ್ಡಾದಲ್ಲಿ ಕೆಡವುತ್ತಿದ್ದಾರೆ. ಹೀಗೆ ಖೆಡ್ಡಾದಲ್ಲಿ ಬೀಳುವ ಆನೆಗಳನ್ನು ಪಳಗಿಸುವ ನೆಪದಲ್ಲಿ ಅವುಗಳ ಸಾವಿಗೂ ಕಾರಣರಾಗಿದ್ದೇವೆ.

ಹೀಗೆ ದೈತ್ಯಪ್ರಾಣಿಗಳಿಗೆ ಈ ಮಟ್ಟದ ತೊಂದರೆಯಾಗುತ್ತಿರಬೇಕಾದರೆ ಮೊಲ, ಜಿಂಕೆಗಳಂಥಾ ಮೃಗಗಳ ಕಥೆಯೇನು? ಈಗಲಾದರೂ ಉಳಿದಿರುವ ಕಾಡು, ಆನೆ, ಆನೆಗಳ ಆವಾಸವನ್ನ ಉಳಿಸುವತ್ತ ನಮ್ಮ ಆಲೋಚನೆಗಳು ಹೋಗಲಿ ಆಗ ಮಾತ್ರ "ಅಂತರಾಷ್ಟ್ರೀಯ ಆನೆ ದಿನ" ಆಚರಣೆಗೊಂದು ಅರ್ಥಸಿಗಬಹುದೆಂಬುದು ನಮ್ಮೆಲ್ಲರ ಆಶಯ.



**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ,**
**ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು**
**ಹಾಗೂ ಲೇಖನಗಳನ್ನು ತಾವೂ**
**ಕಾನನಕ್ಕೆ ಬರೆಯಬಹುದು.**

**ಇ-ಅಂಚೆ :** kaanana.mag@gmail.com

Wildlife Conservation Group



# ಚಿಟ್ಟೆ ಗುರುತು

ವೈಜ್ಞಾನಿಕ ಹೆಸರು : *Euthalia aconthea*
ಸಾಮಾನ್ಯ ಹೆಸರು : Common Baron

ಸುಮಾರು ಎರಡು ವರ್ಷಗಳಿಂದ ನಮ್ಮ ಹಳ್ಳಿಯಲ್ಲಿರುವ ಸ್ವಡಿ ಹೌಸ್ಗೆ ಪ್ರತೀ ವರ್ಷ ಬೇಸಿಗೆಯಲ್ಲಿ ಅಮೇರಿಕಾದಿಂದ ನಮ್ಮ ಅರುಣ್ ಸರ್ ಬರುವಾಗ ಅಮೇರಿಕಾದಲ್ಲಿ ಬೆಳೆಯುವ ಕೆಲವು ತರಕಾರಿ, ಹೂ, ಸೊಪ್ಪು ಹೀಗೇ ತರಾವರಿ ತರಹದ ಬೀಜಗಳನ್ನು ನಮ್ಮ ಕೈ ತೋಟಕ್ಕಾಗಿ ತರುತ್ತಾರೆ. ಹೋದ ಬೇಸಿಗೆಯಲ್ಲಿ ಅವರು ತಂದಿದ್ದ ಸೂರ್ಯಕಾಂತಿ ಬೀಜದಿಂದ ನಮ್ಮ ಕೈತೋಟದ ಸೊಬಗು ಹೆಚ್ಚಿದೆ. ಈಗ ಆಳೆತ್ತರಕ್ಕೆ ಬೆಳೆದು ಎದ್ದು ನಿಂತು ಸೂರ್ಯನತ್ತ ಮುಖಮಾಡಿ ನಿಂತಿವೆ ಈ ಸೂರ್ಯಕಾಂತಿ ಹೂಗಳು. ಇವು ನಮ್ಮ ತೋಟದ ಸೌಂದರ್ಯವರ್ಧಕಗಳಾಗಿ ಮಾತ್ರ ಇರದೆ ಕೆಲವು ಅತಿಥಿಗಳ ಆಗಮನಕ್ಕೂ ಕಾರಣವಾಗಿದೆ. ಯಾರು ಆ ಅತಿಥಿ? ಅಂತೀರಾ, ಮೊನ್ನೆ ನಮ್ಮ ಅಶ್ವತ್ ರವರು ಕೈ ತೋಟದಲ್ಲಿ ಆ ಅತಿಥಿಯನ್ನ ಗಮನಿಸಿ ತಮ್ಮ ಕ್ಯಾಮರಾದಲ್ಲಿ ಸೆರೆಹಿಡಿದಿದ್ದಾರೆ. ಅದು ಬೇರೆಯಾರೂ ಅಲ್ಲ ಬ್ಯಾರನ್ ಚಿಟ್ಟೆ.




ಸಾಮಾನ್ಯವಾಗಿ ಕುರುಚಲು, ಎಲೆ ಉದುರುವ ಕಾಡುಗಳಲ್ಲಿ ಕಾಣಸಿಗುವ ಈ ಚಿಟ್ಟೆಗಳ ಬಣ್ಣ ಕಂದು ಮಿಶ್ರಿತ ಹಸಿರು ಬಣ್ಣ. ರೆಕ್ಕೆಯ ಮುಂಭಾಗದಲ್ಲಿ ನಾಲ್ಕು ಬಿಳಿ ಮಚ್ಚೆಗಳಿರುತ್ತವೆ. ಕೆಳಗಿನ ರೆಕ್ಕೆಯ ಮುಂಭಾಗದ ಅಂಚಿನಲ್ಲಿ ಅಡ್ಡಡ್ಡವಾಗಿ ಚಿಕ್ಕ ಚಿಕ್ಕ ಕಪ್ಪು ಚುಕ್ಕೆಗಳಿರುತ್ತವೆ. ತೇವಾಂಶವಿರುವ ಜಾಗಗಳಲ್ಲಿ ಕೊಳೆತ ಹಣ್ಣುಗಳ ಮೇಲೆ ಹೆಚ್ಚು ಕಾಣಸಿಗುವ ಈ ಚಿಟ್ಟೆಗಳಿಗೆ ಸೂರ್ಯಕಾಂತಿಯೊಡನೆ ಏನು ಮಾತು ಎಂಬುದೇ ಆಶ್ಚರ್ಯ, ಬಹುಶಃ ಅಮೇರಿಕಾದಿಂದ ಬಂದ ಸೂರ್ಯಕಾಂತಿ ಎಂದು ಆ ಚಿಟ್ಟೆಗೂ ತಿಳಿಯಿತೋ ಏನೋ!.

ಈ ಬ್ಯಾರನ್ ಚಿಟ್ಟೆಗಳ ರೆಕ್ಕೆಯು ಸುಮಾರು 58-80mm ಅಗಲದ ರೆಕ್ಕೆಯನ್ನು ಹೊಂದಿರುವ ಈ ಚಿಟ್ಟೆಗಳು ವೇಗವಾಗಿ ಹಾರಬಲ್ಲವು, ಗಂಡು ಮತ್ತು ಹೆಣ್ಣುಗಳು ಬಣ್ಣದಲ್ಲಿ ಸ್ವಲ್ಪ ವ್ಯತ್ಯಾಸ ಕಾಣಬಹುದು.



- ಮಹದೇವ .ಕೆ.ಸಿ



# ಹಕ್ಕಿಲೋಕ

## * ಕಡಲಕ್ಕಿಗಳು

**ಸಾಮಾನ್ಯ ಹೆಸರು** : **Black-headed gull**

**ವೈಜ್ಞಾನಿಕಾ ಹೆಸರು** : ***Chroicocephalus ridibundus***




ಅಂದೊಂದು ದಿನ ಮುಂಜಾನೆಯೇ ಬಾಂಬೆಯ ರಹದಾರಿಗಳಲ್ಲಿ ಸುತ್ತಾಡುತ್ತಾ ತಾಜ್ ಗೇಟ್ ಕಡೆ ಹೊರಟಿದ್ದೆ. ಬೆಳಗು ಇನ್ನೂ ಅಲ್ಪಸ್ವಲ್ಪ ಕತ್ತಲಾದ್ದರಿಂದ ಬಾಂಬೆಯ ಬೀದಿಗಳಲ್ಲಿ ವಾಹನಗಳ ಸದ್ದು ತುಂಬ ವಿರಳವಾಗಿತ್ತು. ಜನಸಂದಣಿ ಇನ್ನೂ ನಿದ್ದೆಯಲ್ಲಿಯೇ ಮುಳುಗಿತ್ತು. ದಾದರ್ ರೈಲ್ವೆ ನಿಲ್ದಾಣದಿಂದ ತಾಜ್ ಹೋಟೆಲ್ ಕಡೆ ಹೊರಟ್ಟಿದ್ದು. ತಾಜ್ ಹೋಟೆಲ್ ಮುಂಭಾಗ ವಿಶಾಲವಾದ ಅರಬ್ಬಿ ಸಮುದ್ರದ ವಿಹಂಗಮ ನೋಟ ನನ್ನೆದುರು ಕಣ್ಣು ಅಗಲಿಸಿದಷ್ಟು ವಿಶಾಲವಾಗುತ್ತಾ ಹೋಯಿತು.

ನನ್ನ ಎಡಕ್ಕೆ ಇಂಡಿಯಾ ಗೇಟಿನ ಕಟ್ಟಡ, ಆ ಮುಸುಕಿನಲ್ಲಿ ಬೆಳಕು ಕಣ್ಣಿಗೆ ಮಬ್ಬಾಗಿ ಕಾಣುತ್ತಿತ್ತು. ಸಮುದ್ರದಲ್ಲಿ ದೋಣಿಗಳು ಸ್ತಬ್ಧವಾಗಿ ನಿಂತಿದ್ದವು. ದೂರದಲ್ಲಿ ದೊಡ್ಡ ದೊಡ್ಡ ಹಡಗುಗಳು ಎತ್ತಲೋ ನಿಧಾನವಾಗಿ ಚಲಿಸುತ್ತಾ ಇದ್ದವು. ಹಿಂದಕ್ಕೆ ತಾಜ್ ಹೋಟೆಲಿನ ಮುಂಭಾಗದ ಬಯಲಿನಲ್ಲಿ ಸಾವಿರಾರು ಪಾರಿವಾಳಗಳು ನೆಲದ ಮೇಲಿದ್ದ ಕಾಳುಗಳನ್ನು ತಿನ್ನುತ್ತಿದ್ದವು. ನನ್ನ ಬಲಕ್ಕೆ ಸಮುದ್ರ ತೀರದಲ್ಲಿ ಕಡಲ ಹಕ್ಕಿಗಳು ನೀರಿಗೆ ಮೇಲಿನಿಂದ ಧುಮುಕುತ್ತಿದ್ದವು. ಈ ಕಡಲ ಹಕ್ಕಿಗಳನ್ನು ಎಂದೂ ಕೂಡ ನೋಡಿರಲಿಲ್ಲ !, ಅದೇ ಮೊದಲು ಇರಬಹುದು. ನೋಡಲು ನೀರು ಕಾಗೆಯಂತೆ ಕಂಡರೂ ಅದು ಕಪ್ಪು ಹಕ್ಕಿಯಲ್ಲ ಬಿಡಿ. ಬದಲಿಗೆ ಶ್ವೇತವರ್ಣದ, ನೀಳ ರೆಕ್ಕೆಗಳಿರುವ, ಕಣ್ಣಿನ ಹಿಂಭಾಗದಲ್ಲಿ ಸ್ವಲ್ಪ ಕಪ್ಪುಮಚ್ಚೆಯಿಂದ ಕೂಡಿರುವ ಹಕ್ಕಿ. ಮೋಟಾದ ಜಲಪಾದಗಳು. ನೀಳವಾದ ಕೊಕ್ಕು ತುದಿಯಲ್ಲಿ ಸ್ವಲ್ಪ ಬಾಗಿರುತ್ತದೆ. ಗುಂಪುಗಳಲ್ಲಿ ಸಮುದ್ರದಲ್ಲಿ ಧುಮುಕಿ ಮೀನು ಶಿಕಾರಿ ಮಾಡುತ್ತವೆ. ನೀರಿನ ಮೇಲೆ ಸ್ವಚ್ಛಂದವಾಗಿ ತೇಲುತ್ತವೆ.





ಸಾಮಾನ್ಯವಾಗಿ ಸಮುದ್ರ ತೀರದಲ್ಲೇ ಮೀನು ಶಿಕಾರಿ ಮಾಡುವ ಈ ಹಕ್ಕಿಗಳು, ನೂರಾರು. ತಾಜ್ ಹೋಟೆಲ್ ನ ಎದುರು ತೀರದಲ್ಲಿ ನಿಂತಿರುವ ದೋಣಿಗಳ ಅಕ್ಕಪಕ್ಕದಲ್ಲಿ ಆಕಾಶದಿಂದ ಧುಮ್ಮಿಕ್ಕುತ್ತಾ ನೀರಿನ ಮೇಲೆ ಹಂಸಗಳಂತೆ ತೇಲಾಡುತ್ತಾ ವಿಹರಿಸುತ್ತಿರುತ್ತವೆ. ಬಾಂಬೆ ನಗರ ಇತ್ತೀಚೆಗೆ ವೇಗವಾಗಿ ಬೆಳೆಯುತ್ತಿರುವುದರಿಂದ

ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಮುದ್ರ ಮೇಲಿನ ಅವಲಂಬನೆ ಕಡಿಮೆಯೇನಿಲ್ಲ. ಜನಸಂಖ್ಯೆ ಹೆಚ್ಚಿದಂತೆ, ಅವರಿಗೆ ಆಹಾರ ಬೇಕು, ಕುಡಿಯಲು ದಿನನಿತ್ಯದ ಕರ್ಮ ಕಾರ್ಯಗಳಿಗೆ ನೀರಿನ ಅವಶ್ಯಕತೆ ಅಷ್ಟಿಷ್ಟಲ್ಲ. ಅವರು ಬಳಸಿ ಬಿಡುವ ಮಾಲಿನ್ಯದ ನೀರು ಸಣ್ಣಸಣ್ಣ ಚರಂಡಿ ಮುಖಾಂತರ, ಪೈಪ್ ಲೈನ್ ಮೂಲಕ ಸಮುದ್ರದ ಸುಮಾರು ಐದಾರು ಕಿಲೋಮೀಟರ್ ದೂರದಲ್ಲಿ, ಆಳದಲ್ಲಿ ಬಿಡುವ ವ್ಯವಸ್ಥೆಯಾಗಿದೆ. ಬಾಂಬೆಯ ಸುತ್ತಮುತ್ತಲಿನ ಸಮುದ್ರದ ತೀರದ ನೀರು ಕಲುಷಿತಗೊಂಡು ಜಲಚರಗಳಲ್ಲದೆ, ಪಕ್ಷಿಗಳಿಗೂ ಸಹ ತೊಂದರೆಗಳು ಬಂದೊದಗಿದೆ.




ಅಂದು ತಾಜ್ ಹೋಟೆಲ್ ಮುಂದೆ ನಿಂತಾಗ ನೋಡಿದ ದೃಶ್ಯ ಇದು. ತಾಜ್ ಹೋಟೆಲ್ ಮುಂದೆಯೇ ಮತ್ತೊಂದು ನೆನಪು ನನ್ನ ಕಣ್ಮುಂದೆ ಹಾದುಹೋಯಿತು. ತಾಜ್ ಹೋಟೆಲ್ ಬಳಿ ಸಾಮಾನ್ಯವಾಗಿ ಬೆಳಗಿನ ಜಾವ ಮೌನವಾಗಿ, ಸಮುದ್ರದ ಅಲೆಗಳಿಂದ ಬರುವ ಗಾಳಿ ತಂಪಾಗಿ, ದಡಕ್ಕೆ ಅಪ್ಪಳಿಸುವ ಅಲೆಗಳ ಶಬ್ದ ಜೊತೆಗೆ ಕಡಲ ಹಕ್ಕಿಗಳ ಕೂಗು ಕೇಳಲು ಇಂಪಾಗಿರುತ್ತದೆ. ಇಂತಹ ಮೌನವನ್ನು ಅಲ್ಲೋಲ ಕಲ್ಲೋಲ ಮಾಡಿದ ದಿನ ನೆನಪಿಗೆ ಬಂದು ಬೆಚ್ಚಿಬಿದ್ದೆ. ಅಂದು ಶನಿವಾರ 29ರ ನವೆಂಬರ್ 2008 ರಂದು ಬೆಳಗ್ಗೆ ಏಂಟುಗಂಟೆಗೆ ಎಲ್ಲಾ ಟಿವಿ ಚಾನಲ್ ಗಳಲ್ಲಿ ಒಂದು ಕ್ಷಣ ದಿಗಿಲು ಬರಿಸುವ ಸುದ್ದಿ ದೇಶವೆಲ್ಲ ಹರಡಿತು. ಬಂದುಕು, ಸಿಡಿಮದ್ದುಗಳ ಶಬ್ದ ಆ ಮೌನವಾದ ಪ್ರದೇಶವನ್ನು ತಲ್ಲಣಗೊಳಿಸಿತು.

ತಾಜ್ ಹೋಟೆಲ್ ಮುಂದೆ ಮೇಯುತ್ತಿದ್ದ ಸಾವಿರಾರು ಪಾರಿವಾಳಗಳು ಬಂದೂಕಿನ ಶಬ್ದಕ್ಕೆ ಭಯದ ಭೀತಿಯಲ್ಲಿ ಆ ಮಹಾನಗರದ ಬೇರೆಡೆಗೆ ಹಾರಿ ಹೋದವು. . . ಏನೋ. . !, ಆ ಕಡಲ ಹಕ್ಕಿಗಳು ಬಾಂಬು, ಬಂದೂಕುಗಳ ಢಂ . . . ಢಂ. . . ಸದ್ದಿಗೆ ತಮ್ಮ ಗೂಡುಗಳಲ್ಲಿ ಮೊಟ್ಟೆ , ಮರಿಗಳನ್ನು ಬಿಟ್ಟು ಆ ಕಡಲನ್ನೇ ದಾಟಿ ದೂರಕ್ಕೆ ಹೋದವು . . . ಏನೋ. . .! ಒಮ್ಮೆ ನನ್ನ ಮನ ಸಮುದ್ರದ ಅಲೆಯಂತೆ ಕಲಕಿ ಮತ್ತೆ ನಿಧಾನವಾಗಿ ಮೌನವಾಯಿತು ಮತ್ತೆ ಪಾರಿವಾಳಗಳು ಬಂದವು, ಈ ಕಡಲ ಹಕ್ಕಿಗಳು ಮತ್ತೆ ಬಂದಿದಾವೆ.




- ಅಶ್ವಥ ಕೆ.ಎನ್





# ವಿವಿ ಅಂಕಣ

## * ಕಾಲೇ ಕಿವಿ- ತಲೆಯೇ ಕಹಳೆ!

ಹಗಲು ರಾತ್ರಿ ಎನ್ನದೆ ದುಡಿಯುವ ಗೆದ್ದಲು ಹುಳುಗಳಿಗೆ ಹಲ್ಲಿ, ಹಕ್ಕಿಗಳು, ಚಿಪ್ಪು ಹಂದಿ ಇವೇ ಮೊದಲಾದ ಶತ್ರುಗಳ ಕಾಟ ಹೆಚ್ಚು. ಈ ಗೆದ್ದಲು ಹುಳುಗಳ ಹುತ್ತಕ್ಕೆ ಶತ್ರುಗಳು ದಾಳಿ ಮಾಡಿದಾಗ ಗೆದ್ದಲುನ ಸೈನಿಕ ಹುಳುಗಳು ಶತ್ರುಗಳ ಬರುವಿಕೆಯನ್ನು ಕಾಲಿನಿಂದಲೇ ಗ್ರಹಿಸಿ ಹುತ್ತದ ಗೋಡೆಗೆ ತಲೆಯಿಂದ ಡಬಕಂಪನ ಡಬ ಗುದ್ದಿ-ಉಂಟುಮಾಡಿ ತನ್ನ ಬಳಗದವರಿಗೆಲ್ಲ ಅಪಾಯದ ಸುದ್ದಿಯನ್ನು ಕೊಡುತ್ತವೆ.

ಈ ಅಪಾಯದ ಸೂಚನೆಯನ್ನು ತಿಳಿದ ಇತರೆ ಗೆದ್ದಲು ಹುಳುಗಳು ತಮ್ಮ ತಲೆಯನ್ನು ಹುತ್ತಕ್ಕೆ ಬಡಿದು ಎಲ್ಲರಿಗೂ ಅಪಾಯದ ರಣಕಹಳೆ ಕೊಡುತ್ತವೆ. ಶತ್ರುವಿನ ಸುಳಿವನ್ನು ಅರಿತ ಕೆಲಸಗಾರ ಹುಳುಗಳು ತಮ್ಮ ಎಲ್ಲಾ ಕೆಲಸವನ್ನು ನಿಲ್ಲಿಸಿ ತನ್ನ ಸಂತಾನದ ರಕ್ಷಣೆಗೆ ಧಾವಿಸುತ್ತವೆ ಎಂದು '*ಪೆಲಿಕ್ಸ್ ಗಾಗರ್*' ಮತ್ತು '*ಹುಲ್ಪ್ ಗ್ಯಾಂಗ್ ಕಿರ್ಚರ್*' ಎಂಬ ಜರ್ಮನ್ ದೇಶದ '*ರೌರ್ ಯುನಿವರ್ಸಿಟಿಯ*' ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ನೆಲದಿಂದ ಮೇಲೆ ಮೂರು ಅಡಿ ಎತ್ತರಕ್ಕೆ ಹುತ್ತ ನಿರ್ಮಿಸಿ, ನೆಲದಾಳದಲ್ಲಿ ಹತ್ತು ಮೀಟರ್ ಆಳದ ಒಂದು ದೊಡ್ಡ ಮನೆ ಗಾತ್ರದಷ್ಟು ವಿಸ್ತಾರವಾದ ನೆಲಮಾಳಿಗೆ ಮನೆ ಮಾಡಿ ವಾಸಿಸುವ *ಕಾಮನ್ ಆಫ್ರೀಕನ್ ಗೆದ್ದಲುಹುಳು*ಗಳನ್ನು ಈ ವಿಜ್ಞಾನಿಗಳ ತಂಡ ಅಧ್ಯಯನ ಮಾಡಿದೆ.





ಈ ಗೆದ್ದಲುಗಳು ಶತ್ರುಗಳ ಬರುವಿಕೆಯ ಸದ್ದನ್ನು ಕಾಲಿನಿಂದಲೇ ತಿಳಿಯಬಲ್ಲವು ಎಂದು ನಿಯಂತ್ರಿತ ಪ್ರಯೋಗಶಾಲೆಯಲ್ಲಿ ಈ ಹುಳುಗಳನ್ನು ಪ್ರಯೋಗಕ್ಕೆ ಒಳಪಡಿಸಿ ಕಂಡು ಹಿಡಿದಿದ್ದಾರೆ.

ಶಬ್ಧ ತರಂಗಗಳು ಗಾಳಿಯಲ್ಲಿ ಚಲಿಸುವಂತೆ ಘನ ವಸ್ತುವಿನಲ್ಲೂ ಚಲಿಸುತ್ತವೆ. ಈ ತತ್ವವನ್ನು ಉಪಯೋಗಿಸಿಕೊಂಡಿರುವ ಗೆದ್ದಲುಗಳು, ಅಪಾಯದ ತರಂಗಗಳು ಹುತ್ತದ ಯಾವ ದಿಕ್ಕಿನಿಂದ ಬರುತ್ತಿವೆ ಎಂದು ಮುಂಗಾಲು ಮತ್ತು ಹಿಂಗಾಲಿಗೆ ಆ ತರಂಗ ತಲುಪುವಲ್ಲಿ ಉಂಟಾಗುವ ಸಣ್ಣ ಅಂತರವನ್ನು ಲೆಕ್ಕಹಾಕಿ ಕಂಡುಕೊಳ್ಳುವಷ್ಟು ಚಾಣಾಕ್ಷವಾಗಿವೆ ಎಂದಿದ್ದಾರೆ.


ನಾಲ್ಕೈದು ಮಿಲಿಮೀಟರ್ ಉದ್ದದ ಈ ಗೆದ್ದಲುಗಳು ತಲೆ ಚಚ್ಚಿಕೊಂಡು 130 m/s ವೇಗದಲ್ಲಿ ಅಪಾಯದ ಸೂಚನೆ ನೀಡಬಲ್ಲವು ಎಂದರೆ ಪ್ರಾಣಿ ಪ್ರಪಂಚದ ಸೋಜಿಗವಲ್ಲವೆ !



- ಶಂಕರಪ್ಪ ಕೆ.ಪಿ



# ಕಾನನ ಬಂಧ




### ಎಡದಿಂದ ಬಲಕ್ಕೆ

1. ಬೃಹದಾಕಾರದ ರೂಪವನ್ನು ಹೀಗೂ ಕರೆಯಬಹುದು (4)

2. ಸಾಮಾನ್ಯವಾಗಿ ಪಕ್ಷಿ ಪ್ರಪಂಚದ ಚಟುವಟಿಕೆಗಳಲ್ಲಿ ಕೋಗಿಲೆ ಈ ಕಾರ್ಯಕ್ಕೆ ಹೆಸರುವಾಸಿ (4)

4. ಈ ಪಕ್ಷಿಯ ದನಿ ತುಂಬಾ ಮಧುರವಾಗಿದೆ (5)

6. ಋಷಿ ಮೂಲವನ್ನು ಹುಡುಕಲು ಆಗದ ಹಾಗೆ ಇದೂ ಒಂದು ಮೂಲ (4)

9. ಜೀವಿಗಳು, ಸಸ್ಯಗಳು, ನಶಿಸಿದ ಬಳಿಕ ಭೂತಳ ಸೇರಿ ಹೊಂದುವ ರೂಪ (5)

10. ಸಾಗರದಲ್ಲಿ ನೀರಿನ ಮಟ್ಟ ಏರುವಿಕೆಗೆ ಒಬ್ಬ ರಾಜನ ಹೆಸರೂ ಇದೆ (3)

12. ಹಿಮಪರ್ವತಗಳಲ್ಲಿ ಕಂಡು ಬಂದ ಯೇತಿ (5)

14. ಮರಿಗಳಿಗೆ ಹಾಲೂಡುವ ಜೀವ ಸಂಕುಲ (3)

16. ಇದು ಬಹಳ ಧೈರ್ಯ ಶಾಲಿ ಪಕ್ಷಿಗಳಲ್ಲೊಂದು (3)

17. ಜೀವಿಗಳಲ್ಲಿ ವಂಶವಾಹಿನಿಯ ಜೊತೆ ಬರುವ ಒಂದು ಗುಣ (4)

### ಮೇಲಿನಿಂದ ಕೆಳಕ್ಕೆ

1. ಸದಾ ಅನ್ಯ ಜೀವಿಗಳ ಮೇಲೆ ಅವಲಂಬಿಸಿ ಬದುಕುವ ಜೀವ ವರ್ಗ ಇಲ್ಲಿ ತಲೆಕೆಳಗಾಗಿದೆ (5)

3. ಭಾರತದ ಪಶ್ಚಿಮ ದಿಕ್ಕಿನಲ್ಲಿರುವ ಪರ್ವತಗಳ ಸಾಲು (5)

5. ಭೂಮಿ ಕಂಪಿಸಿದಾಗ ಉಂಟಾಗುವ ಕ್ರಿಯೆ (3)

7. ಶಿಲಾಯುಗದ ಮಾನವನ ಮುಖ್ಯ ಆಹಾರಗಳಲ್ಲಿ ಒಂದಾದ ಇದು ಔಷಧ ಗುಣವನ್ನೂ ಹೊಂದಿದೆ (3)

8. ಯುಗ ಯುಗಗಳ ನಡುವಿನ ಅಂತರ (4)

9. ಸಾಮಾನ್ಯವಾಗಿ ಕಾದಾಟದಲ್ಲಿ ಒಂದು ಜೀವಿಗೆ ಉಂಟಾಗುವ ಸೋಲು (4)

11. ಈ ಮರುಭೂಮಿಯು ಎಲ್ಲೋ "ಅಟ" ಕಾಯಿಸಿ ಕೊಂಡಂತಿದೆಯಲ್ಲ (4)

12. ಭಾರತದ ಉತ್ತರ ದಿಕ್ಕಿನಲ್ಲಿರುವ ಭವ್ಯ ಗಿರಿಸಾಲು (4)

13. ಹಿಮಾಲಯದಲ್ಲಿರುವ ಈ ಸರೋವರವು ಶಿವನ ಆವಾಸ ಸ್ಥಾನವೆಂದು ನಂಬಲಾಗಿದೆ (7)

15. ಉತ್ತರ ಅಮೇರಿಕಾದ ದಕ್ಷಿಣ ತುದಿಯಲ್ಲಿರುವ ಒಂದು ದ್ವೀಪ (5)

## ಕಾನನ ಬಂಧ ಜುಲೈ ಸಂಚಿಕೆಯ ಉತ್ತರಗಳು

### ಎಡದಿಂದ ಬಲಕ್ಕೆ

1.ಮಹಾಗನಿ, 2.ಮಿತಾಹಾರ, 4.ಮಕರಂದ, 6.ಶಾರೀರಿಕ, 8.ಲಕ್ಷದ್ವೀಪ, 10.ಮದಕರಿ, 12.ದಂತಚೋರ, 13.ಜಿನಮತ, 15.ಪಶುಸಾಕಣೆ, 17.ಕಾಡುಪಾಪ,

### ಮೇಲಿನಿಂದ ಕೆಳಕ್ಕೆ

1.ಮರುಭೂಮಿ, 3.ತಾಳೆಮರ, 5.ನಿಶಾಚರಿ, 7.ಕಲಹರಿ, 9.ಪನಾಮ, 11.ದರೋಜಿ, 14.ನವಣೆ, 15.ಪಶುಪಕ್ಷಿ, 16.ಸಾಗುವಾನಿ, 18.ಮಲೆನಾಡು,

- ಸುಬ್ಬು ಬಾದಲ್



# ಇರುಳು-ಉರುಳು

ದಟ್ಟ ಕಾನನದಲ್ಲಿ

ಹೋಗುವಾಗ

ಭಾಸವಾಗುತ್ತಿತ್ತು

ಹಗಲೆಲ್ಲ ಇರುಳು

ಗಿಡಮರಗಳು ಮಾಯ

ಅಡವಿಗಾಗಿದೆ ಗಾಯ

ನೆನೆಸಿಕೊಂಡರೆ ಭಯ

ಅನಿಸುತಿದೆ

ನಮ್ಮ ಬಾಳಿಗೇ

ಬಂದಿದೆ ಇರುಳು

ಬಿಗಿದಂತಾಗಿದೆ ಉರುಳು

- ಶ್ರೀಕಾಂತ್ ಬಿ. ಭಟ್

# ಪ್ರಕೃತಿ ಬಿಂಬ





